ಮೀನುಗಾರರಿಗೆ ರೂಪಿಸಿರುವ ಯೋಜನೆಗಳು

2064 (2607); ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

ಅ) ರಾಜ್ಯದಲ್ಲಿರುವ ಮೀನುಗಾರರ ಸಂಖ್ಯೆ ಎಷ್ಟು; ಈ ಪೈಕಿ ಹಿಂದುಳಿದ ಪ್ರದೇಶವಾದ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿರುವವರ ಸಂಖ್ಯೆ ಎಷ್ಟು; ಇವರುಗಳ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಕಳೆದ ಮೂರು ವರ್ಷಗಳಲ್ಲಿ ಪ್ರತಿ ಜಿಲ್ಲೆಯ ಮೀನುಗಾರರಿಗೆ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಪ್ರತಿವರ್ಷ ವೆಚ್ಚ ಮಾಡಲಾದ ಹಣವೆಷ್ಟು; ಈ ಯೋಜನೆಗಳ ಅನುಷ್ಠಾನದಿಂದ ಎಷ್ಟು ಜನ ಮೀನುಗಾರ ಕುಟುಂಬಗಳಿಗೆ ಅನುಕೂಲಗಳಾಗಿವೆ; (ಎಲ್ಲಾ ವಿವರಗಳನ್ನು ಜಿಲ್ಲಾವಾರು ಅಂಕಿ ಅಂಶಗಳಲ್ಲಿ ಒದಗಿಸುವುದು);

ಇ) ಪ್ರಸಕ್ತ ಸಾಲಿನಲ್ಲಿ ಇವರುಗಳಿಗೆ ಯಾವ ಯಾವ ಮೂಲಭೂತ ಸೌಲಭ್ಯಗಳನ್ನು ಮತ್ತು ಯಾವ ರೀತಿಯ ನೆರವನ್ನು ನೀಡಲು ಸರ್ಕಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ?

ಶ್ರೀ ಕೆ. ಅಭಯಚಂದ್ರ (ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು)

ಅ) ರಾಜ್ಯದಲ್ಲಿ ಸುಮಾರು 2.95 ಲಕ್ಷ ಸಕ್ರಿಯ ಮೀನುಗಾರರಿದ್ದಾರೆ. ಈ ಪೈಕಿ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸುಮಾರು 0.40 ಲಕ್ಷ ಸಕ್ರಿಯ ಮೀನುಗಾರರಿದ್ದಾರೆ. ಇವರುಗಳ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಸರ್ಕಾರದಿಂದ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳ ಮಾಹಿತಿಯನ್ನು **ಅನುಬಂಧ–1** ರಲ್ಲಿ ಒದಗಿಸಲಾಗಿದೆ.

ಆ) ಕಳೆದ ಮೂರು ವರ್ಷಗಳಲ್ಲಿ ಪ್ರತಿ ಜಿಲ್ಲೆಯ ಮೀನುಗಾರರಿಗೆ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಪ್ರತಿವರ್ಷ ವೆಚ್ಚ ಮಾಡಲಾದ ಹಣ ಹಾಗೂ ಈ ಯೋಜನೆಗಳ ಅನುಷ್ಠಾನದಿಂದ ಅನುಕೂಲ ಪಡೆದ ಮೀನುಗಾರ ಕುಟುಂಬಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧ–2** ರಲ್ಲಿ ಒದಗಿಸಲಾಗಿದೆ.

ಇ) ಪ್ರಸಕ್ತ ಸಾಲಿನಲ್ಲಿ ಇವರುಗಳಿಗೆ ಮೂಲಭೂತ ಸೌಲಭ್ಯಗಳನ್ನು ಮತ್ತು ನೆರವನ್ನು ನೀಡಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರವನ್ನು **ಅನುಬಂಧ–1** ರಲ್ಲಿ ಒದಗಿಸಲಾಗಿದೆ.

ಮಾನ್ಯ ವಿಧಾನಸಭಾ ಸದಸ್ಯರಾದ ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2607ರ

ಅನುಬಂಧ–1

ರಾಜ್ಯದ ಮೀನುಗಾರರ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಸರ್ಕಾರದಿಂದ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ರಾಜ್ಯ ವಲಯ ಯೋಜನೆಗಳು:

1. ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ
2. ಮೀನು ಮರಿ ಖರೀದಿಸಲು ನೆರವು
3. ಸಂಕಷ್ಟ ಪರಿಹಾರ ನಿಧಿ
4. ಮತ್ಸ್ಯಾಶ್ರಯ ಯೋಜನೆ
5. ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ
6. ಸಂಶೋಧನೆ, ವಿಸ್ತರಣೆ, ಪ್ರದರ್ಶನ ಮತ್ತು ತರಬೇತಿ
7. ವಿಶೇಷ ಘಟಕ ಯೋಜನೆ
8. ಗಿರಿಜನ ಉಪಯೋಜನೆ
9. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ

10. ಮೀನು ತತ್ತಿಗಳು (ಮೀನುಮರಿ ಉತ್ಪಾದನಾ/ಪಾಲನಾ ಕೇಂದ್ರಗಳ ನಿರ್ಮಾಣ)
11. ಮೀನು ಮಾರುಕಟ್ಟೆಗಳ ನಿರ್ಮಾಣಕ್ಕಾಗಿ ಸಹಾಯ
12. ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ಹರಿಗೋಲುಗಳ ವಿತರಣೆ
13. ಜಲಾಶಯಗಳಲ್ಲಿ ಮೀನು ಮರಿ ಬಿತ್ತನೆ
14. ಮೀನುಗಾರಿಕೆ ಮಾಹಿತಿಯನ್ನು ಮೊಬೈಲ್ ಸಲಹಾ ಸೇವೆಗಳ ಮೂಲಕ ನೀಡುವುದು
15. ಜಿಲ್ಲಾ ಮಟ್ಟದ ಕಛೇರಿಗಳಿಗೆ ನೀರು ಮತ್ತು ಮಣ್ಣಿನ ಗುಣಮಟ್ಟ ಪರೀಕ್ಷೆ ಕಿಟ್‌ನ್ನು ವಿತರಿಸುವುದು

ಕೇಂದ್ರ ಪುರಸ್ಕೃತ ಯೋಜನೆಗಳು (ರಾಜ್ಯ ವಲಯ)

1. ಕೇಂದ್ರ ಪುರಸ್ಕೃತ ಮೀನುಗಾರರ ಕಲ್ಯಾಣ ಯೋಜನೆ
   ಅ. ಸಾಮೂಹಿಕ ವಿಮಾ ಯೋಜನೆ

ಜಿಲ್ಲಾ ಪಂಚಾಯತ್ ಯೋಜನೆಗಳು

1. ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ
2. ಮೀನು ಮಾರುಕಟ್ಟೆ ನಿರ್ಮಾಣ ಮತ್ತು ಮೀನುಮಾರಾಟಕ್ಕೆ ಸಹಾಯ
3. ಪ್ರದರ್ಶನ ಮತ್ತು ತರಬೇತಿ
4. ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ

ಇತರ ಯೋಜನೆಗಳು

1. ಕೆರೆಗಳ ವಿಲೆ
2. ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯ ನೆರವಿನ ಯೋಜನೆಗಳು

ಮಾನ್ಯ ವಿಧಾನಸಭಾ ಸದಸ್ಯರಾದ ಡಾ: ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2607ಕ್ಕೆ ಅನುಬಂಧ-2

ಕಳೆದ 3 ವರ್ಷಗಳಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳ ಮೀನುಗಾರರಿಗೆ ಫಲಾನುಭವಿ ಆಧಾರಿತ ಯೋಜನೆಗಳ ಅನುಷ್ಠಾನಕ್ಕೆ ಪ್ರತಿ ವರ್ಷ ಮಾಡಲಾದ ವೆಚ್ಚ ಹಾಗೂ ಇದರಿಂದ ಅನುಕೂಲ ಪಡೆದ ಮೀನುಗಾರರ ಕುಟುಂಬಗಳ ಜಿಲ್ಲಾವಾರು ವಿವರ

ರಾಜ್ಯ ವಲಯ ಯೋಜನೆಗಳು

(ರೂ. ಲಕ್ಷಗಳಲ್ಲಿ)

ಕ್ರ ಸಂ	ಜಿಲ್ಲೆಯ ಹೆಸರು	ಮಾಡಲಾದ ವೆಚ್ಚ			ಅನುಕೂಲ ಪಡೆದ ಕುಟುಂಬಗಳ ಸಂಖ್ಯೆ		
		2011-12	2012-13	2013-14	2011-12	2012-13	2013-14
1	ಬಳ್ಳಾರಿ	37.19	31.32	13.3	450	561	127
2	ಬೀದರ್	53.60	42.35	36.42	450	363	168
3	ರಾಯಚೂರು	18.50	17.36	16.73	300	250	95
4	ಕಲಬುರಗಿ	17.15	47.10	17.05	88	594	220
5	ಕೊಪ್ಪಳ	3.65	12.78	13.60	589	244	161
6	ಯಾದಗಿರಿ	13.41	10.55	11.21	265	205	155
	ಒಟ್ಟು	143.5	161.46	108.31	2142	2217	926

ಜಿಲ್ಲಾ ವಲಯ ಯೋಜನೆಗಳು

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಜಿಲ್ಲೆಯ ಹೆಸರು	ಮಾಡಲಾದ ವೆಚ್ಚ			ಅನುಕೂಲ ಪಡೆದ ಕುಟುಂಬಗಳ ಸಂಖ್ಯೆ		
		2011-12	2012-13	2013-14	2011-12	2012-13	2013-14
1	ಬಳ್ಳಾರಿ	23.35	23.55	24.28	55	59	50
2	ಬೀದರ್	8 50	10.73	15.73	86	97	96
3	ರಾಯಚೂರು	32.50	29.24	34.40	15	25	25
4	ಕಲಬುರಗಿ	4.31	11.63	12.06	92	49	159
5	ಕೊಪ್ಪಳ	14.48	14.50	15.15	97	194	393
6	ಯಾದಗಿರಿ	5.34	8.83	8.65	140	235	240
	ಒಟ್ಟು	88.48	98.48	110.27	485	659	963